<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

Spl.C.(NDPS) 13/2024

ಪ್ರಾಸಾಃ 1 ಚಾಸಾಃ 4

ದಿನಾಂಕಃ 09-07-2025

<u>ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು</u>

| | |
|---|---|
| ಹೆಸರು | ಃ- ಮಂಜುಳ |
| ಗಂಡನ ಹೆಸರು | ಃ- ರಮೇಶ |
| ವಯಸ್ಸು | ಃ- 59 ವರ್ಷ |
| ಉದ್ಯೋಗ | ಃ- ಪಿಎಸ್ಐ ಸಿಇಎನ್ |
| ವಾಸ ಸ್ಥಳ | ಃ- ಕೋಲಾರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

2020 ರಿಂದ ಇಲ್ಲಿಯವರಿಗೆ ಕೋಲಾರ ಸಿಇಎನ್ ನಲ್ಲಿ ಪಿಎಸ್ಐ ಆಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕಃ 19-10-2023 ರಂದು ಮದ್ಯಾಹ್ನ 02-00 ಗಂಟೆಗೆ ಠಾಣೆಯಲ್ಲಿದ್ದಾಗ ನರಸಾಪುರ ಕಾಫಿ ಡೇ ಬಳಿ ಒಬ್ಬ ವ್ಯಕ್ತಿ ಗಾಂಜಾ ಮಾರಾಟ ಮಾಡಲು ಬರುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂತು. ಅದನ್ನು ಲಿಖಿತ ರೂಪದಲ್ಲಿ ದಾಖಲಿಸಿಕೊಂಡು ಡೈರಿಯಲ್ಲಿ ನಮೂದಿಸಿದೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ಮಾಹಿತಿಯನ್ನು ಹಿರಿಯ ಅಧಿಕಾರಿಗಳಿಗೆ ರವಾನಿಸಿದೆ. ದಾಳಿ ನಡೆಸಲು ಮತ್ತು ಶೋಧನ ಪತ್ರಕ್ಕೆ ಅನುಮತಿ ಕೋರಿ ಡಿವೈಎಸ್‌ಪಿ ಕೋಲಾರರವರಿಗೆ ಪತ್ರ ಬರೆದಿದ್ದೇನೆ. ಅದನ್ನ ನಿಪಿ-2, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅವರ ಅನುಮತಿಯನ್ನು ನಿಪಿ-3 ಎಂದು, ಅವರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಚಾಸಾ-2 ಮತ್ತು 3 ಪಂಚರನ್ನು ಕರೆಯಿಸಿಕೊಂಡು ಎರಡು ನೋಟೀಸುಗಳನ್ನು ಕೊಟ್ಟಿದ್ದೇನೆ. ಅವುಗಳನ್ನು ನಿಪಿ-4 ಮತ್ತು 5 ಎಂದು, ನನ್ನ ಸಹಿಗಳನ್ನು ನಿಪಿ-4(ಎ) ಮತ್ತು ನಿಪಿ-5(ಎ) ಎಂದು ಗುರುತಿಸಲಾಯಿತು.

ಮಧ್ಯಾಹ್ನ 03-15 ಗಂಟೆಗೆ ಸರ್ಕಾರಿ ವಾಹನದಲ್ಲಿ ನಾವು, ಪಂಚರು ಸಿಬ್ಬಂದಿಯವರೊಂದಿಗೆ ನರಸಾಪುರ ಸೇತುವೆ ಬಳಿ ಇರುವ ಕಾಫಿ ಡೇ ಬಳಿ ವಾಹನ ನಿಲ್ಲಿಸಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ಆಸಾಮಿ ನೀಲಿ ಬಣ್ಣದ ಚೀಲ ಇಟ್ಟುಕೊಂಡಿದ್ದ ಬಗ್ಗೆ ಕಂಡು ಬಂತು. ನಾವೆಲ್ಲರೂ ಪರಸ್ಪರ ಅಂಗಶೋಧನೆ ಮಾಡಿಕೊಂಡು ಮಾದಕ ವಸ್ತು ಇಲ್ಲ ಎಂದು ದೃಢಪಡಿಸಿಕೊಂಡು ಆತನನ್ನು ಸುತ್ತುವರಿದು ಹಿಡಿದೆವು. ಆತನಿಗೆ ಹಿಂದಿ ಭಾಷೆಯಲ್ಲಿ ವಿಚಾರಿಸಿ ಆತನ ಹೆಸರು ವಿಳಾಸ ಪಡೆದುಕೊಂಡೆವು. ನಾನೇ ನೀಲಿ ಬ್ಯಾಗಿನಲ್ಲಿ ಏನಿದೆ ಕೇಳಿದೆ, ಗಾಂಜಾ ಇದೆ ಎಂದು ಹೇಳಿದ, ಆಗ ನಾನು, ಪತ್ರಾಂಕಿತ ಅಧಿಕಾರಿ ಅಥವಾ ನ್ಯಾಯಾಧೀಶರು ಅಂಗಶೋಧನೆ ಮಾಡಬೇಕೆ ಎಂದು ಕೇಳಿದಾಗ ಪತ್ರಾಂಕಿತ ಅಧಿಕಾರಿ ಮುಂದೆ ಮಾಡಬಹುದು ಎಂದು ಹೇಳಿದ. ಆರೋಪಿಗೆ ಕೊಟ್ಟ ನೋಟೀಸನ್ನು ನಿಪಿ-6 ಎಂದು, ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆರೋಪಿ ಒಪ್ಪಿಗೆ ಪತ್ರವನ್ನು ನಿಪಿ-7 ಎಂದು, ಆತನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ-1 ರವರಿಗೆ ಫೋನ್ ಮಾಡಿ ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಲು ಸ್ಥಳಕ್ಕೆ ಬರಲು ಮನವಿ ಮಾಡಿದೆ. ಅವರು ಸ್ಥಳಕ್ಕೆ ಬಂದರು. ಚಾಸಾ-1 ತಾನೇ ಪತ್ರಾಂಕಿತ ಅಧಿಕಾರಿ ಎಂದು ಪರಿಚಯ ಮಾಡಿಕೊಂಡರು. ಅವನ ಒಪ್ಪಿಗೆ ಪಡೆದು ಆತನ ಹತ್ತಿರ ಇದ್ದ ಚೀಲವನ್ನು ತೆರೆದು ನೋಡಲಾಗಿ, ಹೂ, ಕಾಂಡ, ಎಲೆ ಮಿಶ್ರಿತ ಗಾಂಜಾ ಕಂಡು ಬಂತು. ಅದನ್ನು ಹೊಂದಲು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ಹೇಳಿದ. ಚಾಸಾ-6 ರವರ ಮೂಲಕ ತೂಕದ ಯಂತ್ರ ತರೆಯಿಸಿ, ತೂಕ ಮಾಡಲಾಗಿ 2 ಕೆಜಿ 20 ಗ್ರಾಮ್ ಗಾಂಜಾ ಇತ್ತು. ಆರೋಪಿ ಗಾಜಾ ಮಾರಾಟ ಮಾಡಿ ಜೀವನ ಸಾಗಿಸುವುದಾಗಿ ಹೇಳಿದ್ದಾನೆ. ಅದನ್ನು ಒರಿಸ್ಸಾದಿಂದ ತಂದಿದ್ದಾಗಿ ಹೇಳಿದ. ಸದರಿ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಹೊಲೆದು ಕೆ ಎಂಬ ಅಕ್ಷರದಿಂದ ಸೀಲ್ ಹಾಕಿ ಜಪ್ತಿ ಮಾಡಿದೆ. ಸಂಜೆ 03-30 ರಿಂದ 05-30 ಗಂಟೆಯವರೆಗೆ ಪಂಚನಾಮೆ ಬರೆದೆ. ಅದನ್ನು ನಿಪಿ-8 ಎಂದು, ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಅಲ್ಲಿ ಒಂದ ಕಚ್ಚಾ ನಕ್ಷೆ ತಯಾರಿಸಿದೆ. ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಮಯದಲ್ಲಿ ತೆಗೆದ 6 ಫೋಟೋಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು.

ನಂತರ ಆರೋಪಿ, ಮುದ್ದೆ ಮಾಲು ಮಹಜರಿನೊಂದಿಗೆ ಠಾಣೆಗೆ ವಾಪಸ್ಸಾಗಿ ದೂರು ನೀಡಿದೆ. ಅದನ್ನು ನಿಪಿ-11 ಎಂದು, ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿ, ಮಾಲು ಮತ್ತು ಸೀಲನ್ನು ಠಾಣಾಧಿಕಾರಿ ವಶಕ್ಕೆ ಕೊಟ್ಟಿದ್ದೇನೆ. ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. ವಶಪಡಿಸಿಕೊಂಡ ಗಾಂಜಾ ಆರೋಪಿ ಫೋಟೋಗಳಲ್ಲಿ ಕಂಡು ಬರುತ್ತದೆ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಫ್‌ಎ ವಕೀಲರಿಂದಃ</u>

ನಾನು ಠಾಣೆ ಬಿಡುವಾಗ ಎಎಸ್‌ಐ ರವರು ಠಾಣಾಧಿಕಾರಿಯಾಗಿದ್ದರು, ಅವರ ವಶಕ್ಕೆ ಸಾಮಾನ್ಯ ಡೈರಿ ಕೊಟ್ಟಿದ್ದೇನೆ. ನನಗೆ ಮಾಹಿತಿ ಬಂದ ತಕ್ಷಣ ಬರವಣಿಗೆಯಲ್ಲಿ ದಾಖಲಿಸಿದ್ದೇನೆ. ನಿಪಿ-1 ನ್ನು ಈ ಕೇಸಿಗಾಗಿ ಬನಾವಟ್ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಮದ್ಯಾಹ್ನ 02-00 ಗಂಟೆ ಎಂದು ನಮೂದಿಸಿದ್ದೇನೆ. ನಿಪಿ-3 ರಲ್ಲಿ ಮದ್ಯಾಹ್ನ 02-00 ಗಂಟೆ ಎಂದು ತೋರಿಸಿದ್ದಾರೆ ಎಂದರೆ ಸರಿ. ಪಂಚರನ್ನು ಠಾಣೆಗೆ ಕರೆಯಿಸಿಕೊಂಡೆ. ನಿಪಿ-4 ಮತ್ತು 5 ನ್ನು ಪಂಚರಿಗೆ ಠಾಣೆಯಲ್ಲಿ ನೀಡಿದ್ದೇನೆ. ನಿಪಿ-4 ಮತ್ತು 5 ಪಂಚರು ಬಂದ ನಂತರ ಸಿದ್ಧ ಮಾಡಿದ್ದೇನೆ. ನಿಪಿ-4 ಮತ್ತು 5 ಮುಖ್ಯ ವಿಷಯ ಬೆರಳಚ್ಚು ಮಾಡಿಸಿದ್ದು, ಪಂಚರ ವಿಳಾಸ ಕೈ ಬರವಣಿಗೆಯಲ್ಲಿ ಬರೆದಿದ್ದು ಅವುಗಳನ್ನು ಬನಾವಟ್ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ರಲ್ಲಿ 14 ಗಂಟೆ ಎಂದು ಕೈ ಬರಹದಲ್ಲಿ ತಿದ್ದಲಾಗಿದೆ ಎಂದರೆ ಸರಿ. ನಾವು ಠಾಣೆ ಬಿಟ್ಟಾಗ ಮದ್ಯಾಹ್ನ 02-00 ಗಂಟೆ. ಹೋಗುವಾಗ ಲ್ಯಾಪ್ಟಾಪ್ ಮಾತ್ರ ತೆಗೆದುಕೊಂಡು ಹೋಗಿದ್ದೇವೆ. ತೂಕದ ಯಂತ್ರ ಸ್ಥಳದಲ್ಲಿ ತರೆಯಿಸಿಕೊಂಡೆ. ಚಾಸಾ-2 ಮತ್ತು 3 ಸ್ಥಳೀಯರಲ್ಲ ಎಂದರೆ ಕೋಲಾರದವರು ಎಂದು ಉತ್ತರಿಸಿದ್ದಾರೆ. ನಿಪಿ-6 ರಲ್ಲಿ ಪ್ರಾಧೀಕೃತ ಅಧಿಕಾರಿ ಸಹಿ ಇರುವ ಕಡೆ ಸಹಿ ಇಲ್ಲ ಎಂದರೆ ಸರಿ. ನಿಪಿ-6 ನ್ನು ಠಾಣೆಯಲ್ಲಿ ಟೈಪ್ ಮಾಡಿಸಿ ಪ್ರಿಂಟ್ ತೆಗೆಯಲಾಗಿದೆ. ಆರೋಪಿ ಸಮ್ಮತಿ ನಿಪಿ-7 ನ್ನು ಸ್ಥಳದಲ್ಲಿ ಟೈಪ್ ಮಾಡಿಸಿ ಪ್ರಿಂಟ್ ತೆಗೆಯಲಾಗಿದೆ. ಪತ್ರಾಂಕಿತ ಅಧಿಕಾರಿಗೆ ಆರೋಪಿ ಸಮ್ಮತಿ ಕೊಟ್ಟಿದ್ದಾನೆ. ನಿಪಿ-7 ರಲ್ಲಿ ಪತ್ರಾಂಕಿತ ಅಧಿಕಾರಿಯ ಸಹಿ ಮತ್ತು ಮುದ್ರೆ ಇಲ್ಲ ಎಂದರೆ ಸರಿ. ಪತ್ರಾಂಕಿತ ಅಧಿಕಾರಿ ಸ್ಥಳಕ್ಕೆ ಬಂದೇ ಇಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅವರ ಸಹಿ ನಿಪಿ-7 ರಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ.

ಗಾಂಜಾ ಒಟ್ಟಿಗೆ ತೂಕ ಮಾಡಿದ್ದೇನೆ. ಹೂ, ಕಾಂಡ ಎಲೆ ಪ್ರತ್ಯೇಕಿಸಿ ತೂಕ ಮಾಡಿಲ್ಲ. ಆರೋಪಿ ನಿಂತಿದ್ದ ಕಡೆ ಯಾವುದೇ ಖರೀದಿದಾರ ಇರಲಿಲ್ಲ. ಯಾರಾದರೂ ಆರೋಪಿಯಿಂದ ಖರೀದಿ ಮಾಡಿದ ಬಗ್ಗೆ ನಾನು ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಆರೋಪಿ ಒರಿಸ್ಸಾದಿಂದ ಗಾಂಜಾ ತಂದಿದ್ದು, ಅದನ್ನು ಮಾರಾಟ ಮಾಡಿಕೊಂಡು ಜೀವನ ಮಾಡುತ್ತೇನೆಂದು ನನಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ, ಸ್ಥಳ ಮಹಜರಿಗೆ ಯಾರು ಮಾಹಿತಿ ಕೊಟ್ಟರು ನಾನು ಹೇಳಲಾರೆ. ನಿಪಿ-8 ನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಸಂಜೆ 05-30 ಗಂಟೆ ವರೆಗು ಗುನ್ನೆ ಜಾಗೆಯಲ್ಲಿದ್ದೆ. ಗುನ್ನೆ ಜಾಗೆ ಬಳಿ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ತೂಕದ ಯಂತ್ರದ ಸಾಮರ್ಥ್ಯ ಮತ್ತು ಸುಸ್ಥಿತಿಯ ಬಗ್ಗೆ ಮಾಲೀಕನಿಂದ ಯಾವುದೇ ದಾಖಲೆ ಪಡೆದಿಲ್ಲ. ನಾನು ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನೇ ಪಿಎಸ್ಐ ಆದ ಕಾರಣ ಪ್ರಥಮ ವರ್ತಮಾನ ವರದಿಯಲ್ಲಿ ಸಹಿ ಮಾಡುವ ಅವಶ್ಯಕತೆ ಇಲ್ಲ. ಆರೋಪಿಯನ್ನು ಇದೇ ದಿನ ಪ್ರಥಮವಾಗಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ,

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ

Spl.C.(NDPS) 13/2024

ಫ್ರಾಸಾಃ 2 ಚಾಸಾಃ 1

**ದಿನಾಂಕಃ 28.08.2025.**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಹೆಸರು | ಃ- | ಶ್ಯಾಮಲ |
| ಗಂಡನ ಹೆಸರು | ಃ- | ಶ್ರೀನಿವಾಸ್ |
| ವಯಸ್ಸು | ಃ- | 42 ವರ್ಷ |
| ಉದ್ಯೋಗ | ಃ- | ಸಹಾಯಕ ಔಷದ ನಿಯಂತ್ರಕರು, |
| ವಾಸ ಸ್ಥಳ | ಃ- | ಕೋಲಾರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

2022 ರಿಂದ ಇಲ್ಲಿಯವರಿಗೆ ಸಹಾಯಕ ಔಷದ ನಿಯಂತ್ರಕರಾಗಿ ಕೋಲಾರದಲ್ಲಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕಃ19-10-2023 ರಂದು ಫ್ರಾಸಾ-1 ಮದ್ಯಾಹ್ನ 04-00 ಗಂಟೆಗೆ ನನಗೆ ಕರೆ ಮಾಡಿ ನರಸಾಪುರ ಕಾಫಿ ಡೇ ಬಳಿ ಒಬ್ಬ ವ್ಯಕ್ತಿ ಗಾಂಜಾ ಮಾರಾಟ ಮಾಡಲು ಬರುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದಿದೆ, ದಾಳಿ ನಡೆಸಲು ಪತ್ರಾಂಕಿತ ಅಧಿಕಾರಿಯ ಅವಶ್ಯಕತೆ ಇದೆ, ಬನ್ನಿ ಎಂದು ಹೇಳಿದರು. ನಾನು ಮದ್ಯಾಹ್ನ 4.30 ಗಂಟೆಗೆ ನೇರವಾಗಿ ಗುನ್ನೆ ಜಾಗಕ್ಕೆ ಹೋದೆ. ಅಲ್ಲಿಗೆ ಹೋದಾಗ ಒಬ್ಬ ಆಸಾಮಿ, ಪೋಲಿಸರು ಮತ್ತು ಪಂಚರು ಇದ್ದರು. ನಾನೇ ಸದರಿ ಆಸಾಮಿಗೆ ಹಿಂದಿ ಭಾಷೆಯಲ್ಲಿ ಕೇಳಿ ಹೆಸರು ಮತ್ತು ವಿಳಾಸ ಕೇಳಿಕೊಂಡೆ. ನಾನೇ ನೀಲಿ ಬ್ಯಾಗಿನಲ್ಲಿ ಏನಿದೆ ಕೇಳಿದೆ, ಗಾಂಜಾ ಇದೆ ಎಂದು ಹೇಳಿದ, ಆಗ ನಾನು, ಪತ್ರಾಂಕಿತ ಅಧಿಕಾರಿ ಅಥವಾ ನ್ಯಾಯಾಧೀಶರು ಅಂಗಶೋಧನೆ ಮಾಡಬೇಕೆ ಎಂದು ಕೇಳಿದಾಗ ಪತ್ರಾಂಕಿತ ಅಧಿಕಾರಿ ಮುಂದೆ ಮಾಡಬಹುದು ಎಂದು ಹೇಳಿದ. ಫ್ರಾಸಾ-1 ಆರೋಪಿಗೆ ನಿಪಿ.6 ರಂತೆ ನೋಟೀಸನ್ನು ನೀಡಿ ನಿಪಿ-7 ರಂತೆ ಒಪ್ಪಿಗೆ ಪತ್ರವನ್ನು ಪಡೆದುಕೊಂಡಿರುತ್ತಾರೆ. ಅರೋಪಿಯ ಒಪ್ಪಿಗೆ ಪಡೆದು ಆತನ ಹತ್ತಿರ ಇದ್ದ ಚೀಲವನ್ನು ತೆರೆದು ನೋಡಲಾಗಿ, ಹೂ, ಕಾಂಡ, ಎಲೆ

ಮಿಶ್ರಿತ ಗಾಂಜಾ ಕಂಡು ಬಂತು. ಅದನ್ನು ಹೊಂದಲು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ಹೇಳಿದ. ಚಾಸಾ-6 ರವರ ಮೂಲಕ ತೂಕದ ಯಂತ್ರ ತರೆಯಿಸಿ, ತೂಕ ಮಾಡಲಾಗಿ 2 ಕೆಜಿ 20 ಗ್ರಾಮ್ ಗಾಂಜಾ ಇತ್ತು. ಆರೋಪಿ ಗಾಜಾ ಮಾರಾಟ ಮಾಡಿ ಜೀವನ ಸಾಗಿಸುವುದಾಗಿ ಹೇಳಿದ್ದಾನೆ. ಅದನ್ನು ಒರಿಸ್ಸಾದಿಂದ ತಂದಿದ್ದಾಗಿ ಹೇಳಿದ. ಸದರಿ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಹೊಲೆದು ಕೆ ಎಂಬ ಅಕ್ಷರದಿಂದ ಸೀಲ್ ಹಾಕಿ ಜಪ್ತಿ ಮಾಡಿದರು. ಸಂಜೆ 05-30 ವರೆಗೆ ಪಂಚನಾಮೆ ಬರೆದರು. ನನ್ನ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಅಲ್ಲಿ ಒಂದ ಕಚ್ಚಾ ನಕ್ಷೆ ತಯಾರಿಸಿದರು. ಅದನ್ನು ನಿಪಿ-9 ಎಂದು ಗುರುತಿಸಲಾಗಿದೆ. ಸಮಯದಲ್ಲಿ ತೆಗೆದ 6 ಪೋಟೋಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಗಿದೆ. ವಶಪಡಿಸಿಕೊಂಡ ಗಾಂಜಾ ಆರೋಪಿ ಪೋಟೋಗಳಲ್ಲಿ ಕಂಡು ಬರುತ್ತದೆ. ಆರೋಪಿಯನ್ನು ನೋಡಿ ಗುರುತಿಸಿದ್ದೆನೆ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಫ್‌ಎ ವಕೀಲರಿಂದಃ</u>

ನನ್ನ ಮೊಬೈಲ್ ಗೆ ಕರೆ ಮಾಡಿದ್ದಾರೆ. ಆ ದಿನ ನಾನು ಕಚೇರಿಯಲ್ಲಿ ಇದ್ದೆ. ನಮ್ಮ ಕಚೇರಿಯ ಡೈರಿಯಲ್ಲಿ ನಾನು ಕಚೇರಿ ಬಿಡುವ ಬಗ್ಗೆ ನಮೂದಿಸಿದ್ದೆನೆ. ಸಂಜೆ 4.05 ಗಂಟೆಗೆ ಕಚೇರಿ ಬಿಟ್ಟಿದ್ದೆನೆ. ನನ್ನ ಕಚೇರಿ ವಾಹನದಲ್ಲಿ ಗುನ್ನೆ ಜಾಗಕ್ಕೆ ಹೋಗಿದ್ದೆನೆ, ನನ್ನ ಜೊತೆ ಚಾಲಕ ಇದ್ದ. ಕಚೇರಿಯಿಂದ ಗುನ್ನೆ ಜಾಗಕ್ಕೆ 18 ಕಿ.ಮೀ ಅಗುತ್ತದೆ. ಅಂದಾಜು ಅರ್ಧ ಗಂಟೆ ವಾಹನ ಪ್ರಯಾಣ. ನಾನು ಗುನ್ನೆ ಜಾಗಕ್ಕೆ ಸಂಜೆ 4.30 ಗಂಟೆಗೆ ಹೋದೆ. ನಾನು ಆರೋಪಿಯ ಅಂಗ ಶೋಧನೆ ಮಾಡಿದೆ. ನನಗೆ ನಾನೇ ಮಾಡಿಕೊಂಡೆ. ಈ ಪ್ರಕ್ರೀಯೆ 10 ನಿಮಿಷ ಅಗಿದೆ. ಹೂ, ಕಾಂಡ ಎಲೆ ಪ್ರತ್ಯೇಕಿಸಿ ತೂಕ ಮಾಡಿಲ ಎಂದರೆ ಸರಿ. ಯಾವುದೇ ಹಣ್ಣು ಇರಲಿಲ್ಲ. ಆರೋಪಿ ನಿಂತಿದ್ದ ಕಡೆ ಯಾವುದೇ ಖರೀದಿದಾರ ಇರಲಿಲ್ಲ. ಯಾರಾದರೂ ಆರೋಪಿಯಿಂದ ಖರೀದಿ ಮಾಡಿದ ಬಗ್ಗೆ ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ. ಆರೋಪಿ ಒರಿಸ್ಸಾದಿಂದ ಗಾಂಜಾ ತಂದಿದ್ದು, ಅದನ್ನು ಮಾರಾಟ ಮಾಡಿಕೊಂಡು ಜೀವನ ಮಾಡುತ್ತೇನೆಂದು ನನಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ತೂಕದ ಯಂತ್ರ ಯಾರು, ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ಫ್ರಾಸಾ-1 ರವರೇ ಕೆ ಸೀಲನ್ನು ತೆಗೆದುಕೊಂಡು ಹೋದರು. ನಿಪಿ.6 ಮತ್ತು 7 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಿಪಿ.9 ರಲ್ಲಿ ನಾನು ಗುನ್ನೆ ಜಾಗಕ್ಕೆ ಹೋಗದ ಕಾರಣ ನಾನು ಸಹಿ

ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ದಿನ ನ್ಯಾಯಾಲಯದಲ್ಲಿ ಪ್ರಥಮವಾಗಿ ನೋಡುತ್ತಿದ್ದೆನೆ ಎಂದರೆ ಸರಿಯಲ್ಲ. ಮಹಜರ್ ಗೆ ನಾನು ಸೆನ್ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೆನೆ ಎಂದರೆ ಸರಿಯಲ್ಲ. ನಾನು ಗುನ್ನೆ ಜಾಗಕ್ಕೆ ಹೋಗಿಲ್ಲ, ಆರೋಪಿಯ ಅಂಗ ಶೋಧನೆ ಮಾಡಿಲ್ಲ, ಅವನಿಂದ ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದೆರ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

Spl.C.(NDPS) 13/2024

ಪ್ರಾಸಾಃ ಚಾಸಾಃ
**ದಿನಾಂಕಃ 28-03-2025**

<u>ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು</u>

ಹೆಸರು ಃ-
ತಂದೆಯ ಹೆಸರು ಃ-
ವಯಸ್ಸು ಃ-
ಉದ್ಯೋಗ ಃ-
ವಾಸ ಸ್ಥಳ ಃ-

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

ಸ

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ವಾದ ಕೇಳಲಾಯಿತು ಅದರಂತೆ ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

Spl.C.(NDPS) 13/2024

ಫ್ರಾಸಾಃ ಚಾಸಾಃ
**ದಿನಾಂಕಃ 28-03-2025**

<u>ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು</u>

ಹೆಸರು ಃ-
ತಂದೆಯ ಹೆಸರು ಃ-
ವಯಸ್ಸು ಃ-
ಉದ್ಯೋಗ ಃ-
ವಾಸ ಸ್ಥಳ ಃ-

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

ಸ

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ವಾದ ಕೇಳಲಾಯಿತು ಅದರಂತೆ ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**